ರಾಜ್ಯದಲ್ಲಿ ನಡೆದ ಅತ್ಯಾಚಾರ ಪ್ರಕರಣಗಳು

೧೫೪೪ (೩೮೯ ಬಿ) ಶ್ರೀ ಜಿ. ರಾಜೂಗೌಡ (ಹಾನೂರು).—ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿ ೧೯೮೫-೮೬ ಮತ್ತು ೧೯೮೬-೮೭ನೇ ಸಾಲುಗಳಲ್ಲಿ ಎಷ್ಟು ಜನ ಅಪ್ರಾಪ್ತ ವಯಸ್ಸಿನ ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರ ನಡೆದಿದೆ, ಈ ಬಗ್ಗೆ ಎಷ್ಟು ಮೊಕದ್ದಮೆಗಳನ್ನು ನ್ಯಾಯಾಲಯದಲ್ಲಿ ದಾಖಲು ಮಾಡಲಾಗಿದೆ ?

ಆ) ಆ ಪೈಕಿ ಎಷ್ಟು ಮಂದಿ ಅಪರಾಧಿಗಳಿಗೆ ಶಿಕ್ಷೆಯಾಗಿದೆ, ಈ ರೀತಿ ನಡೆಯುತ್ತಿರುವ ದುಷ್ಕೃತ್ಯಗಳನ್ನು ತಡೆಗಟ್ಟಲು ಸರಕಾರದವರು ವ್ಯಾಪಕವಾಗಿ ಕೈಗೊಂಡಿರುವ ಕಾರ್ಯಕ್ರಮಗಳೇನು?

ಶ್ರೀ ಬಿ. ರಾಚಯ್ಯ (ಗೃಹ ಸಚಿವರು).—

ಅ)	ವಿವರಗಳು	೧೯೮೫-೮೬	೧೯೮೬-೮೭
	ಅ) ಒಟ್ಟು ಪ್ರಕರಣಗಳು	೧೨೨	೧೦೬
	ಆ) ಆರೋಪಣಾ ಪಟ್ಟಿ ದಾಖಲಾದುದು	೯೯	೭೨
	ಇ) ಆರೋಪಿಗಳ ಮೇಲೆ ಭ್ರಮ ತೆಗೆದು ಕೊಂಡ ಪ್ರಕರಣಗಳು :	೧೦	೬

ಭಾರತ ದಂಡ ಸಂಹಿತೆ, ಸಿಆರ್‌ಪಿಸಿ ಹಾಗೂ ಎವಿಡೆನ್ಸ್ ಆಕ್ಟ್ ಅಡಿ ಪ್ರಸ್ತುತ ಪ್ರಕಾರ ತಿದ್ದುಪಡಿ ಮಾಡಿರುವ ಉಪಬಂಧದ ಅನುಸಾರ ಕಠಿಣ ಕ್ರಮಗಳನ್ನು ಜರುಗಿಸಲಾಗುತ್ತಿದೆ.

ಶ್ರೀ ಜಿ. ರಾಜೂಗೌಡ.—ಮಾನ್ಯ ಅಧ್ಯಕ್ಷರೇ, ೧೯೮೫-೮೬ ರಲ್ಲಿ ೨೩ ಪ್ರಕರಣಗಳಲ್ಲಿ ಮತ್ತು ೧೯೮೬-೮೭ರಲ್ಲಿ ೩೪ ಪ್ರಕರಣಗಳಲ್ಲಿ ಇವರು ಮೊಕದ್ದಮೆ ಹೂಡಲಿಲ್ಲ ಈ ಪ್ರಕರಣಗಳಲ್ಲಿ, ಪೋಲೀಸರೇ ಅಪರಾಧಿಯಾಗಿದ್ದಾರೆ. ಹಾಗೆಯೇ ಈ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಅತ್ಯಾಚಾರ ಎಷ್ಟು ನಡೆದಿದೆ ಇದರಲ್ಲಿ ನೀವು ಹೂಡಿಗತಕ್ಕಂಥ ಮೊಕದ್ದಮೆಗಳು ಎಷ್ಟು ಇವೆ ಅನ್ನುವುದನ್ನು ನೋಡುವುದಾದರೆ ಇದರಲ್ಲಿ ಶೇಕಡ ೯೦ ರಷ್ಟು, ೯೦ ರಷ್ಟು ಮೊಕದ್ದಮೆಗಳು ಖುಲಾಸೆಯಾಗಿ ಬಿಟ್ಟಿದೆ. ಈ ರೀತಿ ನಡೆದರೆ ನಿಮ್ಮ ಕಾರ್ಯಾಚರಣೆ ಯಾವ ರೀತಿ ನಡೆಯುತ್ತದೆ ಎನ್ನುವುದು ಗೊತ್ತಾಗುತ್ತದೆ. ಇದಕ್ಕೆ ಪರಿಹಾರವೇನು ?

ಶ್ರೀ ಬಿ. ರಾಚಯ್ಯ.—ಅವರು ಕಂಪ್ಲೇಂಟ್ ಕೊಟ್ಟಾಗ ಕೇಸ್ ರಿಜಿಸ್ಟರ್ ಮಾಡಿಕೊಳ್ಳುತ್ತಾರೆ. ಅನಂತರ ಅವರು ಅದನ್ನು ಇನ್‌ವೆಸ್ಟಿಗೇಟ್ ಮಾಡತಕ್ಕಂಥ ಸಂದರ್ಭದಲ್ಲಿ ಅವನ್ನು ಅವರು ಆರೋಗ್ಯ ಇಲಾಖೆಯ ತಜ್ಞರಿಗೆ ಕಳುಹಿಸಿ ಕೊಡುತ್ತಾರೆ ಮತ್ತು ಫಾರೆನ್ಸಿಕ್ ಲ್ಯಾಬೋರೇಟರಿಗೂ ಕಳುಹಿಸಿಕೊಡುತ್ತಾರೆ. ಇದರಲ್ಲಿ ಸತ್ಯಾಂಶ ಇದೆಯೇ ಇಲ್ಲವೇ ಅವರು ಇಷ್ಟರಷ್ಟನ್ನೂ ಪಡೆದುಕೊಂಡು ಇದರ ಜೊತೆಗೆ ಅಲ್ಲಿ ಸಾಕ್ಷಿಗಳ ಆಧಾರಗಳನ್ನೂ ಸಹ ಇಟ್ಟುಕೊಂಡು ಆ ಕೇಸನ್ನು ದಾಖಲು ಮಾಡಿಕೊಂಡಿರುತ್ತಾರೆ. ಅನೇಕ ಸಂದರ್ಭದಲ್ಲಿ ಕೆಲವು ಕೇಸುಗಳು ಸತ್ಯಕ್ಕೆ ದೂರವಾಗಿ ಬಂದಿರುವುದರಿಂದ ಆದರಲ್ಲಿ ಕೆಲವು ಮಟ್ಟಿಗೆ ಸಾಕ್ಷಿ ಇರದೇ ಇರುವುದರಿಂದ ಅದರಲ್ಲಿ ಕೆಲವು ಮಟ್ಟಿಗೆ ಸಾಕ್ಷಿ ಇರದೇ ಇರುವುದರಿಂದ ಅವು ಹಾಗೆಯೇ ಇರುತ್ತವೆ. ಕೆಲವು ಕೇಸುಗಳಿಗೆ ಸಾಕ್ಷಿ ಪುರಾವೆಗಳನ್ನು ಪಡೆದುಕೊಳ್ಳುವುದಕ್ಕೆ ಕೆಲವರು ಬಾರದೇ ಇರುವುದರಿಂದ ಆ ಕೇಸುಗಳು ಮುಂದುವರೆಯುವುದಕ್ಕೆ ಸಾಧ್ಯವಿಲ್ಲ. ಹಾಗಾಗಿ ಕೆಲವು ಪ್ರಕರಣಗಳು ಹಾಗೆಯೇ ಇವೆ. ಇನ್ನು ಮಾನ್ಯ ಸದಸ್ಯರು ಇದರ ಬಗ್ಗೆ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟವರ್ಗದವರ ಮತ್ತು ಇನ್ನೂ ಇತರೇ ಬೇರೆಯವರ ಬಗ್ಗೆ ಕೆಲವು ವಿವರಣೆಗಳನ್ನು ಕೇಳಿದ್ದಾರೆ. ಈಗ ಆ ವಿವರಗಳು ನನ್ನ ಹತ್ತಿರ ಇಲ್ಲ. ಇಲ್ಲಿಯವರೆಗೆ ನನಗೆ ಬಂದಿರತಕ್ಕಂಥ ವಿವರಗಳನ್ನು ಕೊಡಬಲ್ಲೆ. ಅದಕ್ಕೆ ಮಾನ್ಯ ಅಧ್ಯಕ್ಷರು ಅಪ್ಪಣೆ ಕೊಟ್ಟರೆ ಓದಿಬಿಡುತ್ತೇನೆ.

ಶ್ರೀ ಬಿ. ರಾಚಯ್ಯ.—ಜಿಲ್ಲಾವಾರು ವಿವರಗಳು ಈ ರೀತಿ ಇದೆ

ಜಿಲ್ಲೆಗಳ ಹೆಸರು	೧೯೮೪	೧೯೮೫	೧೯೮೬
ಬೆಂಗಳೂರು	೨೦	೨೩	೩೨
ಬೆಂಗಳೂರು ಜಿಲ್ಲೆ	೭	೬	೮
ಬೆಳಗಾಂ	೫	೬	೨
ಬಳ್ಳಾರಿ	೪	೪	೪
ಬೀದರ್	೩	೨	–
ಬಿಜಾಪುರ	೪	೩	೯
ಚಿಕ್ಕಮಗಳೂರು	೨	೨	–
ಚಿತ್ರದುರ್ಗ	೧೦	೧೬	೧೪
ದಕ್ಷಿಣಕನ್ನಡ	೫	೧	೧
ಧಾರವಾಡ	೮	೬	೧೨
ಗುಲ್ಬರ್ಗ	೯	೫	೫
ಹಾಸನ	೪	೬	೨
ಕೊಡಗು	೫	೫	೩
ಕೋಲಾರ	೪	೫	೩
ಕೆ.ಜಿ.ಎಫ್.	೪	೫	೨
ಮಂಡ್ಯ	೫	೪	೬
ಮೈಸೂರು	೯	೧೦	೭
ರಾಯಚೂರು	೧೦	೫	೯
ಶಿವಮೊಗ್ಗ	೬	೫	೮
ತುಮಕೂರು	೬	೩	೭
ಉತ್ತರಕನ್ನಡ	೨	—	೨

ಇದರ ಜೊತೆಗೆ ರೈಲ್ವೇಸ್‌ನಿಂದ ಬಂದಿರುವುದು ಒಂದು, ಹೀಗೆ ೧೯೮೪ರಲ್ಲಿ ೩೩, ೧೯೮೫ ರಲ್ಲಿ ೧೨೧ ಮತ್ತು ೧೯೮೬ರಲ್ಲಿ ೧೩೩ ಪ್ರಕರಣಗಳೆಂದು ವರದಿಯಾಗಿವೆ.

ರಾಣೇಬೆನ್ನೂರು ನಗರದಲ್ಲಿ ಕೆ.ಎಸ್.ಆರ್.ಟಿ.ಸಿ. ಡಿಪೋ

೧೫೪(೧೮೯) ಶ್ರೀ ಕೆ.ಬಿ. ಕೋಳೀವಾಡ, (ರಾಣೇಬೆನ್ನೂರು),—ಮಾನ್ಯ ಸಾರಿಗೆ ಸಣ್ಣ ಉಳಿತಾಯ ಮತ್ತು ಬಂಧೀಖಾನೆ ರಾಜ್ಯ ಸಚಿವರು ಈ ಕೆಳಕಂಡಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ;—

ಅ) ರಾಣೇಬೆನ್ನೂರು ನಗರದಲ್ಲಿ ಒಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಡಿಪೋ ಸ್ಥಾಪಿಸಲು ಸರಕಾರದವರಿಗೆ ಮನಗಳೇನಾದರೂ ಬಂದಿವೆಯೇ ?

ಆ) ಹಾಗಿದ್ದಲ್ಲಿ, ಈ ದಿಸೆಯಲ್ಲಿ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ?

ಶ್ರೀ ವೀರಣ್ಣ(ಸಾರಿಗೆ ಸಣ್ಣ ಉಳಿತಾಯ ಮತ್ತು ಬಂಧೀಖಾನೆ ರಾಜ್ಯಮಂತ್ರಿಗಳು).—

ಅ) ಬಂದಿವೆ.